Sl No	Schemes	Road length In kms.	Total grants Rs.in lakhs
1	SCP	2.68	49.16
2	TSP	0.10	3.35
3	Nabard	3.80	59.30
4	CRF	9.60	100.00

Tender process being in progress in respect of these works, works will be taken up in due course.

In addition to this, Rs.34.70 lakhs of funds has been provided for Pre-monsoon maintenance works during the year 2009-10, maintenance works are also under progress.

The development of roads in Mulabagilu taluk is being undertaken in a phased manner under different schemes/heads of account.

737 ಶ್ರೀ ಅಪ್ಪಸಾಹೇಬ(ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವಪರಂಪರೆಯ ಪಟ್ಟಿಯಲ್ಲಿ (UNESCO) ಐತಿಹಾಸಿಕ ಸ್ಮಾರಕಗಳನ್ನು ಸೇರಿಸಲು ಅನುಸರಿಸುವ ಮಾನದಂಡಗಳೇನು;

ಆ) ರಾಜ್ಯದ ಯಾವ ಯಾವ ಐತಿಹಾಸಿಕ ಸ್ಮಾರಕಗಳು ಯುನೆಸ್ಕೋ ಪಟ್ಟಿಯಲ್ಲಿ ಸೇರಿವೆ;

ಇ) ಹೊಸದಾಗಿ ಯಾವ ಸ್ಮಾರಕ ಹಾಗೂ ಪ್ರದೇಶಗಳನ್ನು ವಿಶ್ವಪರಂಪರೆ ಪಟ್ಟಿಯಲ್ಲಿ ಸೇರಿಸಲು ಸರ್ಕಾರ ಶಿಫಾರಸ್ಸು ಮಾಡಿರುತ್ತದೆ;

ಈ) ಬಿಜಾಪುರದಲ್ಲಿರುವ ವಿಶ್ವವಿಖ್ಯಾತ ಗೋಲಗುಮ್ಮಟವನ್ನು ಯುನೆಸ್ಕೋ ಪಟ್ಟಿಯಲ್ಲಿ ಸೇರಿಸಲು ಸರ್ಕಾರ ಉದ್ದೇಶಿಸಿದೆಯೇ; ಹಾಗಿದ್ದಲ್ಲಿ ಕೈಗೊಂಡ ಕ್ರಮಗಳೇನು;

ಉ) ವಿಶ್ವವಿಖ್ಯಾತ ಗೋಳಗುಮ್ಮಟದ ಸ್ಮಾರಕದ ಅಭಿವೃದ್ಧಿ, ರಕ್ಷಣೆ ಹಾಗೂ ಪ್ರವಾಸಿಗರನ್ನು ಆಕರ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಒಂದು ಪ್ರದೇಶದ ಸಾಂಸ್ಕೃತಿಕ ಸಂಪತ್ತಿನ ಪುರಾತನ ಅವಶೇಷಗಳ ವಾಸ್ತುಶಿಲ್ಪ, ಶಿಲ್ಪವರ್ಣಚಿತ್ರಗಳು/ ಭಿತ್ತಿಚಿತ್ರಗಳು ಕೋಟೆ ಕಂದಕಗಳು, ನಗರ ಯೋಜನೆ ರಕ್ಷಣಾವ್ಯೂಹ, ಧಾರ್ಮಿಕ ಕಟ್ಟಡಗಳು, ದಂಡು ಮತ್ತಿತರ

ಅವಶೇಷಗಳು ಬಹು ವಿಸ್ತಾರವಾಗಿಯೂ, ಅಭೂತಪೂರ್ವಕವಾಗಿಯೂ ಇದ್ದು ವಿಶ್ವದ ಇತಿಹಾಸದಲ್ಲಿ ಇದಕ್ಕೆ ಒಂದು ಮಹತ್ವದ ಹಾಗೂ ಶಾಶ್ವತ ಸ್ಥಾನವಿರಬೇಕು. ಇಂತಹ ಸ್ಮಾರಕಗಳು/ಪ್ರದೇಶಗಳು ವಿಶ್ವಪರಂಪರೆ ಪಟ್ಟಿಯಲ್ಲಿ ಸ್ಥಾನ ಪಡೆಯಲು ಅರ್ಹತೆ ಪಡೆದಿರುತ್ತವೆ.

ಆ) ಅ) ಹಂಪಿಯ ಸ್ಮಾರಕ ಸಮೂಹಗಳು (1986 ರಲ್ಲಿ)

ಆ) ಪಟ್ಟದಕಲ್ಲು ಸ್ಮಾರಕ ಸಮೂಹಗಳು (1987 ರಲ್ಲಿ)

ಇ) ಕರ್ನಾಟಕ ರಾಜ್ಯದ ಈ ಕೆಳಕಂಡ ಪ್ರದೇಶಗಳಲ್ಲಿನ ಸ್ಮಾರಕಗಳು ವಿಶ್ವಪರಂಪರೆ ಪಟ್ಟಿಯಲ್ಲಿ ಸೇರ್ಪಡೆ ಹೊಂದಲು ಅರ್ಹತೆ ಪಡೆದಿವೆ.

1. ಬೇಲೂರು, ಹಳೇಬೀಡು, ಸೋಮನಾಥಪುರ ಮತ್ತು ಶ್ರವಣಬೆಳಗೋಳ.
2. ಬೃಹತ್ ಶಿಲಾಸಮಾಧಿ ರಚನೆಗಳ ಸಂಕೀರ್ಣ, (ಕೊಪ್ಪಳ ಜಿಲ್ಲೆ, ಗಂಗಾವತಿ ತಾಲ್ಲೂಕು ಹಿರೇಬೆಣಕಲ್ ನಲ್ಲಿರುವ ಒಂದು ಐತಿಹಾಸ ಪೂರ್ವ ನಿವೇಶನ)
3. ಲಕ್ಕುಂಡಿ ಮತ್ತು ಡಂಬಾಳ್‌ನಲ್ಲಿರುವ (ಗದಗ್ ಜಿಲ್ಲೆ) ತರುವಾಯ ಚಾಲುಕ್ಯ ವಾಸ್ತುಶಿಲ್ಪ.
4. ಗುಲ್ಬರ್ಗಾ ಇಂಡೋ–ಇಸ್ಲಾಮಿಕಲ್ ವಾಸ್ತುಶಿಲ್ಪ.
5. ಬೀದರ್‌ನಲ್ಲಿನ ಇಂಡೋ–ಇಸ್ಲಾಮಿಕ್ ಸ್ವಷ್ಟ ವಾಸ್ತುಶಿಲ್ಪಗಳು.
6. ಬಿಜಾಪುರದಲ್ಲಿನ ಇಂಡೋ–ಇಸ್ಲಾಮಿಕ್ ಸ್ವಷ್ಟ ವಾಸ್ತುಶಿಲ್ಪಗಳು.
7. ಐಹೊಳೆ – ಬಾದಾಮಿ.

ಈ) ಹೌದು ಈ ಬಗ್ಗೆ ಮಹಾನಿರ್ದೇಶಕರು, ಭಾರತೀಯ ಪುರಾತತ್ವ ಸರ್ವೇಕ್ಷಣ, ನವದೆಹಲಿ ಇವರಿಗೆ ದಿನಾಂಕ: 16–2–2008 ರಂದು ಪತ್ರ ಬರೆದು ಶಿಫಾರಸ್ಸು ಮಾಡಲಾಗಿದೆ.

ಉ) ಭಾರತೀಯ ಪುರಾತತ್ವ ಸರ್ವೇಕ್ಷಣ, ಧಾರವಾಡ ವಲಯವು ಬಿಜಾಪುರ ನಗರದಲ್ಲಿರುವ ಗೋಲಂಗುಂಬಜ್‌ನ್ನು ನೋಡಲು ಬರುವ ಸಂದರ್ಶಕರಿಗಾಗಿ ಕೆಲವು ಸಾರ್ವಜನಿಕ ಸೌಕರ್ಯಗಳನ್ನು ಒದಗಿಸಿದೆ. ಕುಡಿಯುವ ನೀರು, ಶೌಚಾಲಯ ಕ್ಯಾಂಟೀನ್, ಪಾರ್ಕಿಂಗ್, ಸಂದರ್ಶಕರಿಗಾಗಿ ಬೆಂಚುಗಳು, ಅಂಗವಿಕಲರಿಗೆ ವೀಲ್‌ಛೇರ್, ಪ್ರಕಟಣೆಗಳ ಮಾರಾಟ ಕೌಂಟರ್, ಗೈಡ್ ಸೌಕರ್ಯ, ನಿರ್ದೇಶಿಕೆ ಹೆಸರಿನ ಫಲಕಗಳು ಹಾಗೂ ಉತ್ತಮಮಟ್ಟದ ಆಕರ್ಷಣೀಯ ಹುಲ್ಲುಹಾಸು ಮುಂತಾದವುಗಳು.